## ತಿವಿಸಿಕೊಂಡವನು

ಗಡ್ಡ ಬೋಳಿಸುವ ಕಲೆ ಕೈಗತ್ತದ ಪರಿಣಾಮ ವಾರಕ್ಕೊಮ್ಮೆ ಪಕ್ಕದ ಬೀದಿಯಲ್ಲಿರುವ ಮೆನ್ಸ್ ಬ್ಯೂಟಿ ಪಾರ್ಲರ್‌ಗೆ ತಪ್ಪದೇ ಹಾಜರಾಗುತ್ತಿದ್ದ ಇವನು, ಮೊನ್ನೆ ಕೂಡ ಹಾಗೆ ಗಡ್ಡಕ್ಕೆ ಬ್ಲೇಡು ಹಾಕಿಸಿಕೊಳ್ಳಲು ಹೋಗಿ ಕುರ್ಚಿಯ ಮೇಲೆ ಕುಳಿತು ಎದುರಿದ್ದ ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಳ್ಳುತ್ತಿದ್ದ. ಮುಖದ ಮೇಲೆ ಉಗುರು ಬೆಚ್ಚನೆ ನೀರಿನ ಅಭಿಷೇಕವಾದ ಮೇಲೆ, ಫೋಮು ಮೆತ್ತಿಸಿಕೊಳ್ಳುವ ಕಾಯಕದಲ್ಲಿ ತಲ್ಲೀನನಾಗಿದ್ದ. ಇದೇ ವೇಳೆ ತನ್ನ ಬ್ಯೂಟಿ ಹೆಚ್ಚಿಸಿಕೊಳ್ಳುವ ಸಲುವಾಗಿ ಮತ್ಯಾರೋ ಅಲ್ಲಿಗೆ ಬಂದದ್ದು ಇವನ ಅರಿವಿಗೆ ಬಂತು.

ಹಾಗೆ ಹೊಸದಾಗಿ ಅಲ್ಲಿಗೆ ಬಂದವನು ಬಾಚಣಿಗೆ ಕೊಡಿ, ಒಂಚೂರು ತಲೆ ಬಾಚ್ಕೊಬೇಕು ಅಂತ ಬ್ಯೂಟಿ ಪಾರ್ಲರ್ ಮಾಲೀಕನನ್ನು ಕೇಳಿದ. ಅವನ ಗಲೀಜು ಬಟ್ಟೆ ಮತ್ತು ಧೂಳಿಡಿದ ತಲೆ ಗಮನಿಸಿ, 'ನಿಮ್ಮಂತೋರಿಗೆಲ್ಲ ತಲೆ ಬಾಚೋಕೆ ಬಾಚಣಿಗೆ ಕೊಟ್ರೆ ಕಸ್ಟಮರ್‌ಗಳು ನಮ್ ಮುಖಕ್ಕುಗಿತಾರೆ. ಸುಮ್ನೆ ಹೋಗಯ್ಯ... ಬೆಳಿಗ್ ಬೆಳಿಗ್ಗೆನೇ ಬಂದು ಇಲ್ಲಿ ನಮ್ ತಲೆ ತಿನ್ಬೇಡ' ಅಂದ.

ಮಾಲೀಕನ ಬಾಯಿಯಿಂದ ಹೊರ ಬಂದ ಕಸ್ಟಮರ್ ಪದದಡಿ ತಾನು ಕೂಡ ಬರುತ್ತೇನಲ್ಲವಾ ಅಂತ ಚಿಂತಿಸಲು ಮುಂದಾದ ಇವನೊಳಗೆ, ಅಸಲಿಗೂ ನಾನು ಹಾಗೆ ಈ ಮಾಲೀಕನಿಗೆ ಉಗಿತೀನಾ ಎಂಬ ಪ್ರಶ್ನೆ ಮಿಸುಕಾಡಲಾರಂಭಿಸಿತು.

ತನ್ನ ಅನುಮತಿ ಪಡೆಯದೆ ತನ್ನನ್ನು ಅವನ ಬಗ್ಗೆ ಅಸಹನೆ ಹೊಂದಿರುವ ಮನುಷ್ಯರ ಗುಂಪಿಗೆ ಅನಾಯಾಸವಾಗಿ ಸೇರಿದ್ದರ ಬಗ್ಗೆ ಅಸಮಾಧಾನ ಗೊಂಡರೂ ತೋರ್ಪಡಿಸಿಕೊಳ್ಳದೆ ತನ್ನ ನುಣುಪಾದ ಮುಖವನ್ನೊಮ್ಮೆ ನೀವಿಕೊಂಡು ಮನೆಯ ಹಾದಿ ಹಿಡಿದ.

ಧೂಳು ಹಿಡಿದ ತಲೆಯವನು ರಸ್ತೆ ಬದಿಯಲ್ಲಿದ್ದ ಕಾರಿನ ಕನ್ನಡಿಗೆ ತನ್ನ ಮುಖವೊಡ್ಡಿ, ಕೈ ಬೆರಳುಗಳಲ್ಲೇ ತಲೆ ಬಾಚಿಕೊಳ್ಳುತ್ತಿರುವುದು ಇವನ ಕಣ್ಣಿಗೆ ಬಿತ್ತು. ಮನುಷ್ಯತ್ವ ಕೆಣಕಲಾರಂಭಿಸಿತು.

■ ಎಚ್.ಕೆ.ಶರತ್



ಈಶ್ವರ

ನ್ಯಾನೊ ಕಥೆಗಳು

## ಭಿಕ್ಷುಕ

ಶ್ರೀಮಂತನೊಬ್ಬ ಕಾರಿನಲ್ಲಿ ದೇವಸ್ಥಾನಕ್ಕೆ ಬಂದ. ಕಾರಿನಿಂದಿಳಿದು ನೇರವಾಗಿ ದೇವಸ್ಥಾನದೊಳಕ್ಕೆ ನಡೆಯುತ್ತಿದ್ದ. ಆ ದೇವಸ್ಥಾನದ ಮುಂದೆ ಕುಳಿತಿದ್ದ ಭಿಕ್ಷುಕನೊಬ್ಬ ಚಿಲ್ಲರೆ ಹಣಕ್ಕಾಗಿ ಬೇಡುತ್ತಿದ್ದ. ಆ ಭಿಕ್ಷುಕನಿಗೆ ಒಂದು ರೂಪಾಯಿಯನ್ನೂ ನೀಡದೇ ಆ ಶ್ರೀಮಂತ ನೇರವಾಗಿ ದೇವರ ಮುಂದೆ ನಡೆದ. ಅಲ್ಲಿ ದೇವರಿಗೆ ಕೈ ಮುಗಿದು ಇನ್ನಷ್ಟು ಆಸ್ತಿ ಸಂಪತ್ತನ್ನು ಕರುಣಿಸುವಂತೆ ಬೇಡಿಕೆಯಿಟ್ಟ. ಅದನ್ನು ಹೊರಗಿನಿಂದ ನೋಡುತ್ತಿದ್ದ ಭಿಕ್ಷುಕ "ಇವನು ನನಗಿಂತ ದೊಡ್ಡ ಭಿಕ್ಷುಕ" ಎಂದು ಒಳಗೊಳಗೆ ನಕ್ಕು ಸುಮ್ಮನಾದ. ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯಲ್ಲಿ ಭಿಕ್ಷುಕರೇ ಎಂಬುದಕ್ಕೆ ಆ ಘಟನೆ ಸಾಕ್ಷಿಯಾಗಿತ್ತು.

## ಜೈಲು ಶಿಕ್ಷೆ

ಅಮಾಯಕ ವ್ಯಕ್ತಿಯೊಬ್ಬನ ಮೇಲೆ ಸುಳ್ಳು ಕೊಲೆ ಆರೋಪ ಹೊರಿಸಿ ನ್ಯಾಯಾಲಯಕ್ಕೆ ಕರೆತಂದರು. ನ್ಯಾಯಾಲಯ ಜೈಲು ಶಿಕ್ಷೆ ವಿಧಿಸಿತು. ಆ ಅಮಾಯಕನನ್ನು ಜೈಲಿಗೆ ಹಾಕಲಾಯಿತು. ಅವನ ಮೇಲಿನ ಸುಳ್ಳು ಆರೋಪದ ಪರ ವಾದ ಮಂಡಿಸಿ ಜೈಲುಶಿಕ್ಷೆ ಕೊಡಿಸುವ ಮೂಲಕ ಕಾನೂನನ್ನೇ ಕೊಲೆ ಮಾಡಿದ್ದ ವಕೀಲ ಮಾತ್ರ ಹಣ ಗಳಿಸಿ ರಾಜಾರೋಷವಾಗಿ ತಿರುಗಾಡುತ್ತಿದ್ದ.

## ಅಂತರಾಳ

ಆ ಹೆತ್ತ ತಂದೆತಾಯಿಗಳು ತೀರಾ ಬಡವರು. ಮನಸ್ಸಿನಲ್ಲಿ ಏನೇ ಕಷ್ಟಗಳಿದ್ದರೂ ತಮ್ಮ ಮಕ್ಕಳ ಮುಂದೆ ತಮ್ಮ ಕಷ್ಟ ತಿಳಿಯಬಾರದೆಂದು ನಗುವಂತೆ ನಟಿಸಿ ಮಕ್ಕಳು ಕೇಳಿದ್ದನ್ನೆಲ್ಲ ಕೊಡಿಸಿ ಒಳಗೊಳಗೆ ಅಳುತ್ತಿದ್ದರು.

ಆದರೆ ಮಕ್ಕಳು ಮಾತ್ರ ಎಷ್ಟೇ ಸಂತೋಷವಾಗಿದ್ದರೂ ಪಾಲಕರ ಮುಂದೆ ಅತ್ತಂತೆ ನಟಿಸಿ ಬಯಸಿದ್ದನ್ನೆಲ್ಲ ಪಡೆದು ಒಳಗೊಳಗೆ ನಗುತ್ತಿದ್ದರು. ಮಕ್ಕಳ ಅಂತರಾಳವನ್ನು ಪಾಲಕರು ಅರಿತು ಸುಮ್ಮನಾದರು. ಆದರೆ ಪಾಲಕರ ಅಂತರಾಳದ ನೋವನ್ನು ಮಕ್ಕಳು ಅರಿಯದೇ ಹೋದರು.

## ನಿಜವಾದ ದೇವರು

ಕುಟುಂಬದ ಸದಸ್ಯರೆಲ್ಲರೂ ಸೇರಿ ಒಂದು ದಿನ ದೇವಸ್ಥಾನಕ್ಕೆಂದು ದೂರದೂರಿಗೆ ಹೊರಟರು. ಬಸ್ಸಿನ ಚಾಲಕನು ದೇವಸ್ಥಾನವನ್ನು ತಲುಪಿಸುವಲ್ಲಿ ತಡ ಮಾಡಿದನೆಂದು ಅವನಿಗೆ ಹಿಡಿಶಾಪ ಹಾಕುತ್ತ ದೇವಸ್ಥಾನದ ಕಡೆ ದೇವರನ್ನು ಕಾಣಲು ಹೊರಟರು.

ಆದರೆ ದಾರಿ ಮಧ್ಯೆ ಅಪಘಾತವಾಗಬೇಕಿದ್ದ ಬಸ್ಸನ್ನು ಅಪಾಯದಿಂದ ಪಾರು ಮಾಡಿ ಕುಟುಂಬದವರ ಪ್ರಾಣ ಉಳಿಸಿದ್ದ ಆ ಚಾಲಕನೇ ನಿಜವಾದ ದೇವರೆನ್ನುವುದು ಅವರಿಗೆ ಅರ್ಥವಾಗಲಿಲ್ಲ.

■ ಸೋಮಲಿಂಗಪ್ಪ ಬೆಣ್ಣಿ ಗುಳದಳ್ಳಿ